# ನೆಲದ ಅಂಚು

'ಮುಗಿಲ ಮಾರಿಗ್ರs ರಾಗ ರತಿಯಾ ನಂಜ ಏರಿತ್ತs
—ಆಗ ಸಂಜೆಯಾಗಿತ್ತ;
ನೆಲದ ಅಂಚಿಗೆ ಮಂಜಿನ ಮುಸುಕು ಹ್ಯಾಂಗೋ ಬಿದ್ದಿತ್ತs
ಗಾಳಿಗೆ ಮೇಲಕ್ಕೆದ್ದಿತ್ತs'

ಭಾವಗೀತೆ ಕೇಳುತ್ತಿದ್ದಂತೆ ಶಿವಾನಂದ ಅರ್ಥಗರ್ಭಿತವಾಗಿ ನಕ್ಕು ಒಮ್ಮೆ ತಲೆ ಕೊಡವಿದ. ಪಕ್ಕದಲ್ಲೇ ಕೇಸರಿಭಾತು ಮೆಲ್ಲುತ್ತಿದ್ದ ಸುಧೀರ "ಏನಾಯ್ತೋ?"ಎಂದು ಕೇಳಿದಾಗ ಶಿವಾನಂದ "ಅಲ್ಲ, ಬೇಂದ್ರೆ ಅಜ್ಜನ ಈ ಭಾವಗೀತೆ ಎಷ್ಟು ಅರ್ಥಪೂರ್ಣವಾಗಿದೆ ನೋಡು. ನಾವೆಲ್ಲ ಮಧ್ಯಮ ವರ್ಗದ ಜನ. ನೆಲದ ಮೇಲಿರೋರು. ಚೂರು ಸಂತಸ ಸಿಕ್ಕರೆ ಸಾಕು ಆಕಾಶವೇ ಕೈಗೆ ಸಿಕ್ಕಿದಂತೆ ಹಾರಾಡಲಾರಂಭಿಸುತ್ತೇವೆ. ನಾನು ಕಾರು ತೆಗೆದುಕೊಂಡು ಶ್ರೀಮಂತನಾಗಿಬಿಟ್ಟೆ ಅನ್ಕೊಂಡೆ. 'ಕಾರ್ ಓನರ್' ಅಂತ ಜಂಭ ಪಟ್ಕೊಂಡೆ. ಆದರೆ ಕಾರಿನ ಜಗತ್ತು ಪ್ರವೇಶಿಸಿದಾಗಲೇ ಗೊತ್ತಾದದ್ದು ಎಷ್ಟೊಂದು ಮಾಡೆಲ್‌ಗಳಿವೆ. ಬೆಲೆಯೂ ಬೇಕಾದಷ್ಟು. ನಮ್ಮದು ಬೇಸಿಕ್ ಮಾಡೆಲ್. ಅಂದ್ರೆ ನಾವಿನ್ನೂ ಕೆಳಗಿನ ಮೆಟ್ಟಿಲು ಏರುತ್ತಾ ನೆಲದ ಅಂಚಿನ ಮೇಲೆಯೇ ಇದ್ವಿ. ಬೇಂದ್ರೆಯವರು ಹೇಳಿದಂತೆ ಮಂಜಿನ, ಮಾಯೆಯ ಮುಸುಕು ನಮ್ಮನ್ನು ಆವರಿಸಿತ್ತು. ಅದು ಹಾರುತ್ತಿದ್ದಂತೆ ಮತ್ತೆ ನೆಲ ಗೋಚರವಾಯ್ತು" ಎನ್ನುತ್ತ ಶಿವಾನಂದ ಉಸಿರೆಳೆದುಕೊಂಡ.